will consider this and be kind enough to acknowledge the services of the community and give us an opportunity also to serve in the Corporation.

SRI R. V. DESHPANDE —we have already acknowledged the services of the community as Sri Fernandez is here. As far as the Bangalore City Corporation is concerned in the Bangalore City there are 12 Assembly constituencies and in Corporation there are 87 divisions, where in we have reserved 17 for women and 9 for SCs STs and absolutely we do not find any reason for reserving these constituencies as requested by the Hon. Member.

SRI J.A. FERNANDEZ.—Artscle 334 (3) of the Constitution provides for clubbing our community along with SCs/STs. 9 constituencies are reservaedifor SCs/STs. I think there are 87 constituencies. At least 2 can be given to the Anglo-Indian community. Will the, Government kindly consider?

SRI R. V. DESPHANDE.—I have already replied categorically.

ಅಧ್ಯಕ್ಷರು —ಮಾನ್ಯ ಲಕ್ಕಪ್ಪನವರ ಹಾಗೂ ಶ್ರೀ ಯಡಿಯೂರಪ್ಪನವರ ಪ್ರಶ್ನೆಗೆ ಸಮಯವನ್ನು ಕೇಳಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಜಿಲ್ಲಾ ಪರಿಷತ್ ಅಧ್ಯಕ್ಷರುಗಳು ಎಷ್ಟು ಟಿ. ಎ. ಡಿ. ಎ. ತೆಗೆದಂಕೊಂಡಿದ್ದಾರೆಂದು ನಾನು ಕೇಳಿದ್ದೇನೆ. ಇದಕ್ಕೆ ಸಮಯ ಏಕೆ ಬೇಕು ? ಯಾವಾಗ ಉತ್ತರ ಕೊಡುತ್ತಾರೆ ?

ಅಧ್ಯಕ್ಷರು.—ಕೊಡಿಸುತ್ತೇನೆ.

ಎನ್. ಆರ್. ಐ. ಕಾಲೋನಿಯಲ್ಲಿ ನಿರ್ಮಿತವಾದ ಕಟ್ಟಡ

೩೨೭ ಶ್ರೀ ಆರ್.ಎನ್. ನಾಯ್ಕ (ಭಟ್ಕಳ).—ಮಾನ್ಯ ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಎನ್.ಆರ್.ಐ. ಕಾಲೋನಿಯಲ್ಲಿ ಲೋಕೋಂಡಪಾಲ್ ಹೆಸರಿನಲ್ಲಿ ನಿರ್ಮಿತವಾದ ಕಟ್ಟಡವನ್ನು ನೆಲಸಮ ಮಾಡಲು ಆದೇಶಿಸಲಾಗಿತ್ತೆ ?

ಆ) ಯಾವ ದಿನಾಂಕದಂದು ಲಿಖಿತ ಆದೇಶ ನೀಡಲಾಯಿತು ?

ಇ) ಯಾವ ತಾರೀಖಿನಂದು ಜಾರಿಗೆ ಇಳಿಸಲಾಯಿತು ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಆರ್. ಎನ್. ನಾಯ್ಕ.—ಕಳೆದ ಸಲ ಶಾಸನ ಸಭೆಯಲ್ಲಿ ಎನ್.ಆರ್ ಐ. ಹಗರಣದ ಬಗ್ಗೆ ಪ್ರಸ್ತಾಪ ಮಾಡಿದಾಗ ಹೇಳಿದರು ಏನೇನು ಬಿಲ್ಡಿಂಗ್ ಪಗೈರಿಗೆ ಅವಕಾಶ ಕೊಟ್ಟಿದ್ದೇವೆ ಅದನ್ನೆಲ್ಲಾ ನಾವು ಕೆಡವಿ ಹಾಕುತ್ತೇವೆಂದು. ಅದು ತಮಗೆ ನೆನಪು ಇದೆ ಎಂದು ನನಗನ್ನಿಸುತ್ತದೆ. ಈವರೆಗೆ ಯಾರೂ ಯಾರ ಬಿಲ್ಡಿಂಗ್ ಅನ್ನು ಬರಂಳಿಸಿ ಹಾಕಿದ್ದೀರಿ ಮತ್ತು ಅದಕ್ಕೆ ಯಾವಾಗ ಆದೇಶ ಕೊಟ್ಟಿದ್ದೀರಿ ಇಲ್ಲವೇ ಅಸೆಂಬ್ಲಿಯಲ್ಲಿ ಹೇಳಿ ಸುಮ್ಮನೆ ಕುಳಿತಿದ್ದೀರಾ ?

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಸದಸ್ಯರು ಎನ್. ಆರ್. ಐ. ಕಾಲೋನಿಯಲ್ಲಿ ಲೋಕಂಡಪಾಲ್ ಹೆಸರಿನಲ್ಲಿ ನಿರ್ಮಿತವಾದ ಕಟ್ಟಡವನ್ನು ನೆಲಸಮ ಮಾಡಲು ಆದೇಶಿಸಲಾಗಿದೆಯೇ

ಎಂದು ಪ್ರಶ್ನೆ ಕೇಳಿದ್ದಾರೆ. ಇಲ್ಲವೆಂದೂ ಹೇಳಿದ್ದೇನೆ. ಎನ್.ಆರ್ ಐ. ಕಾಲೋನಿಯಲ್ಲಿ ಲೋಕಂಡ ವಾಲನಿಗೆ ಪರ್ಮಿಶನ್ ಕೊಟ್ಟಿಲ್ಲ. ನಾವು ಅವರಿಗೆ ಫೇವರ್ ಇಲ್ಲ. ಸರ್ವೆ ಮಾಡಿ ಎನ್. ಆರ್. ಐ. ಅಸೋಸಿಯೇಷನ್‌ಗೆ ಕಾಂಪೌಂಡ್ ಹಾಕಲಿಕ್ಕೆ ಬಿಲ್ಡಿಂಗ್ ಕಟ್ಟಲಿಕ್ಕೆ ಅನುಮತಿ ನೀಡಿದ್ದುದು ನಿಜ. ಆದರೆ ಲೋಕಂಡವಾಲನಿಗೆ ಅನುಮತಿಯನ್ನು ಕೊಟ್ಟಿಲ್ಲ. ಬಿ. ಡಿ. ಎ. ಅವರು ಮಾಡಿದಂತಹ ರೆಸಲ್ಯೂಷನ್ ಅನ್ನು ಕ್ಯಾನ್ಸಲ್ ಮಾಡಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಕೂಡ ಈ ಬಗ್ಗೆ ದಿನಾಂಕ ೧೫-೧-೧೯೮೯ ರಂದು ಹೇಳಿದ್ದಾರೆ. ಬಿ. ಡಿ. ಎ. ನವರು ಆದೇಶ ಕೊಟ್ಟರು ಕೂಡ ಅದನ್ನು ನಂತರ ಕ್ಯಾನ್ಸಲ್ ಮಾಡಿದ್ದೇವೆ. ಬಿ. ಡಿ. ಎ. ನವರು ಅಲ್ಲಿ ಬೋರ್ಡ್ ಹಾಕಿದ್ದಾರೆ. ನಮ್ಮ ವಾಚ್ ಅಂಡ್ ವಾರ್ಡ್ ಸ್ಟಾಫ್ ಅನ್ನು ಅಲ್ಲಿಗೆ ನೀಡಿದ್ದೇವೆ. ಅಲ್ಲಿ ವಾಚ್ ಅಂಡ್ ವಾರ್ಡ್ ಸ್ಟಾಫ್ ಇಲ್ಲ. ಅದಕ್ಕೋಸ್ಕರ ನಾವು ಕೊಟ್ಟಿದ್ದೇವೆ. ಅಲ್ಲಿ ಮೆಟೀರಿಯಲ್ಸ್ ಇಲ್ಲ. ಅವರು ಕಟ್ಟಿರುವ ಕಟ್ಟಡವನ್ನು ಡೆಪಾಲಿಷ್ ಮಾಡಬೇಕೇ ಅಥವಾ ಬಿ. ಡಿ. ಎ. ನವರೇ ಉಪಯೋಗ ಮಾಡಿಕೊಂಡು ಅಲ್ಲಿ ಸ್ಟೀಲ್, ಸಿಮೆಂಟ್ ಸ್ಟೋರೇಜ್‌ಗೆಂದಾ ಉಪಯೋಗ ಮಾಡಬೇಕೇ ಎಂದು ಕೇಳಿದ್ದಾರೆ. ಬಿ. ಡಿ. ಎ. ನೇ ಉಪಯೋಗ ಮಾಡಲೀ ಎಂದು ತಿಳಿಸಿದ್ದೇವೆ.

ಶ್ರೀ ಆರ್. ಎನ್. ನಾಯ್ಕ್.—ಲೋಖಂಡವಾಲ ಅಂದರೆ ಯಾರು ಯಾವ ರಾಜ್ಯದವರು ಅವರ ಹೆಸರಿನಲ್ಲಿ ಅಲ್ಲಿ ಬೋರ್ಡ್ ಹಾಕಿ ಅಲ್ಲಿ ಬಿಲ್ಡಿಂಗ್ ಕಟ್ಟುತ್ತಿರುವುದು ನಮಗೆ ಗೊತ್ತಿದೆಯೇ ಅಥವಾ ಗೊತ್ತಿಲ್ಲವೇ ? ಗೊತ್ತಿಲ್ಲವೆಂದು ಹೇಳುವುದಾದರೆ ನಾನು ಪ್ರಶ್ನೆ ಕೇಳುವುದಿಲ್ಲ. ಗೊತ್ತಿದೆ ಎಂದು ಹೇಳಿದರೆ ಅದರ ಪೂರ್ಣ ವಿವರವನ್ನು ಕೊಡಿ.

ಶ್ರೀ ಆರ್.ವಿ. ದೇಶಪಾಂಡೆ.—ನಮ್ಮ ರೆಕಾರ್ಡ್ಸ್ ಪ್ರಕಾರ ಲೋಖಂಡವಾಲಾನಿಗೆ ನಾವು ಅನುಮತಿಯನ್ನು ಕೊಟ್ಟಿಲ್ಲ. ಕಾಂಪೌಂಡ್ ವಾಲ್ ಹಾಕಲಿಕ್ಕೆ ಹೇಳಿಲ್ಲ.

ಶ್ರೀ ಆರ್. ಎನ್. ನಾಯ್ಕ್.—ಲೋಖಂಡವಾಲ ಎಂದು ಬೋರ್ಡ್ ಹಾಕಿ ಅಲ್ಲಿ ಕೆಲಸ ಮಾಡುತ್ತಿರುವ ವಿವರವೇನಾದರೂ ನಿಮ್ಮ ಸರಕಾರಕ್ಕೆ ಗೊತ್ತಿದೆಯೇ ಎಂದು ನಾನು ಪ್ರಶ್ನೆ ಕೇಳಿದ್ದುದು. ನಿಮಗೆ ಗೊತ್ತಿದ್ದರೆ ಹೌದು ಎಂದು ಹೇಳಿ. ಈ ರೀತಿ ಇಂಥವರು ಈ ರಾಜ್ಯದಲ್ಲಿ ಎಷ್ಟೋ ಜನರು ಮಾಡಿಕೊಂಡಿದ್ದಾರೆ. ಇದೇನೂ ದೊಡ್ಡ ವಿಚಾರವಲ್ಲ. ತಮ್ಮ ಕೃಪಾ ಕಟಾಕ್ಷದಲ್ಲಿ ಆಗಿರಬಹುದು. ಅದನ್ನು ನಾವು ತಪ್ಪು ಎಂದು ಹೇಳುವುದಿಲ್ಲ. ನಿಮ್ಮಗಳ ದಯೆ ಅಂಥವರ ಮೇಲೆಲ್ಲಾ ಇದೆ. ಸರ್ಕಾರದ ದಯೆ ಲೋಖಂಡವಾಲರಂಥ ದೊಡ್ಡವರ ಮೇಲೆಲ್ಲಾ ಇದೆ, ನನಗೆ ಏನು ಆಗಬೇಕು ಎಂದು ಹೇಳಿದರೆ ಈ ಲೋಖಂಡವಾಲ ಅಂಥ ಹೆಸರಿನಲ್ಲಿ ಬೆಂಗಳೂರಿನಲ್ಲಿ ಎಲ್ಲಿಯಾದರೂ ಸೈಟಿನಲ್ಲಿ ಬೋರ್ಡನ್ನು ಹಾಕಿ ಕೆಲಸವನ್ನು ಮಾಡುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ ? ಅದು ಗೊತ್ತಿದ್ದರೆ ಗೊತ್ತು ಎಂದು ಹೇಳಿ, ಇಲ್ಲದ್ದಿದರೆ ಇಲ್ಲ ಎಂದು ಹೇಳಿ.

ಶ್ರೀ ಆರ್. ವಿ. ದೇಶ್‌ಪಾಂಡೆ.—ನಮ್ಮ ರೆಕಾರ್ಡ್ಸ್ ಪ್ರಕಾರ Sri Lokhandawala was the developer. ಇದರ ಮುಂದೆ ನಮಗೆ ಏನೂ ಗೊತ್ತಿಲ್ಲ.

ಅಧ್ಯಕ್ಷರು.—ಮುಂದಿನ ಪ್ರಶ್ನೆ ಶ್ರೀ ಮಹಮ್ಮದ್ ಲೈಕುದ್ದೀನ್ ಅವರದು.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ಇದಕ್ಕೆ ಉತ್ತರವನ್ನು ಇನ್ನೂ ಸ್ವಲ ಹೊತ್ತಿನಲ್ಲಿ ಹೇಳುತ್ತೇನೆ.

ಧಾರವಾಡ ನಗರದಲ್ಲಿ 1986 ರಿಂದ ನಿವೇಶನಗಳನ್ನು ಸಂಘ ಸಂಸ್ಥೆಗಳಿಗೆ ನೀಡಿರುವ ಬಗ್ಗೆ

೫೯೨. ಶ್ರೀ ಚಂದ್ರಕಾಂತ ಬೆಲ್ಲದ್(ಧಾರವಾಡ ನಗರ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ನಗರದಲ್ಲಿ ೧೯೮೬ ರಿಂದ ನಿವೇಶನಗಳನ್ನು ಯಾವ ಯಾವ ಸಂಘ ಸಂಸ್ಥೆಗಳಿಗೆ ನೀಡಲಾಗಿದೆ,

(ವಿವರಗಳನ್ನೊದಗಿಸುವುದು),

ಆ) ಅದರಂತೆ ಮಹಾನಗರಸಭೆಯ ವ್ಯಾಪ್ತಿಯಲ್ಲಿನ ನಿವೇಶನಗಳನ್ನು ಸಂಘ ಸಂಸ್ಥೆಗಳಿಗಾಗಿ ನೀಡಲಾಗಿದೆಯೇ,

(ವಿವರಗಳನ್ನೊದಗಿಸುವುದು)